KARNATAKA SUCCESS NO 1
Kannada Daily
ಸಂಪಾದಕರು/ಮಾಲೀಕರು
ರಾಧಿಕಾ ಎ.ಆರ್.
Volume: 02 Issue-116
ಗುರುವಾರ 06 ಮಾರ್ಚ್ 2025
Price: 2.00 Rs. Pages-2

RNI: KARKAN/2023/88508

ಕರ್ನಾಟಕ ಸಕ್ಸಸ್ ನಂ 1

ಕನ್ನಡ ದಿನಪತ್ರಿಕೆ

ನಮ್ಮ ಸಂಪರ್ಕ: ಇ-ಮೇಲ್: karnatakasuccessno1ar@gmail.com ಮೊಬೈಲ್: 9380988530, 9606988508

ಬೆಂಗಳೂರಿನ ಕೋರಮಂಗಲದಲ್ಲಿ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ವತಿಯಿಂದ ಮಹಿಳಾ ದಿನಾಚರಣೆಯ ಪ್ರಯುಕ್ತ ಹಮ್ಮಿಕೊಂಡಿದ್ದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳೆಯರಿಗೆ ಸನ್ಮಾನ ಸಮಾರಂಭದಲ್ಲಿ ಸುರಭಿ ಸೌಹಾರ್ದ ಬ್ಯಾಂಕ್ ಲಿ. ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಪೂಜಾಶ್ರೀಯವರಿಗೆ ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕ ಗ್ರಾಮೀಣ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಬ್ಯಾಂಕ್ ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಜಗತ್ತಿನ ಕೌಶಲ್ಯ ರಾಜಧಾನಿ 'ಭಾರತ ': ಪ್ರೊ.ಡಂಕನ್ ಬೆಂಟ್ಲಿ

ತುಮಕೂರು: ಭಾರತಕ್ಕೆ ಜಾಗತಿಕ ಕೌಶಲ್ಯ ರಾಜಧಾನಿಯಾಗುವ ಎಲ್ಲಾ ಅರ್ಹತೆ ಮತ್ತು ಅವಕಾಶವಿದೆ ಎಂದು ಆಸ್ಟ್ರೇಲಿಯಾ ಫೆಡರೇಷನ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಂಕನ್ ಬೆಂಟ್ಲಿ ಅಭಿಪ್ರಾಯಪಟ್ಟಿದ್ದಾರೆ.

ನಗರದ ಶಿರಾರಸ್ತೆಯ ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದ ವತಿಯಿಂದ ತರಬೇತಿ ಮತ್ತು ಉದ್ಯೋಗ ಇಲಾಖೆಯ ಸಂಯುಕ್ತಾಶ್ರಯದಲ್ಲಿ "ಎಂಪ್ಲಾಯಬಲಿಟಿ.ಲೈಫ್ ಹಾಗೂ ಫೆಡರೇಷನ್ ಯುನಿವರ್ಸಿಟಿ ಆಸ್ಟ್ರೇಲಿಯಾ" ಇವರುಗಳ ಜಂಟಿ ಸಹಯೋಗದೊಂದಿಗೆ "ಫ್ಯೂಚರ್ ವರ್ಕ್ ಲ್ಯಾಬ್" ಕಾರ್ಯಾಗಾರವನ್ನು ಶ್ರೀದೇವಿ ಆಸ್ಪತ್ರೆಯ ಅಡಿಟೋರಿಯಂನಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಾಗಾರವನ್ನು ಉದ್ಘಾಟಿಸಿ ಕುಲಪತಿ ಪ್ರೊ. ಡಂಕನ್ ಬೆಂಟ್ಲಿ ಮಾತನಾಡುತ್ತಾ ಭಾರತವನ್ನು ಜಗತ್ತಿನ ಕೌಶಲ್ಯ ರಾಜಧಾನಿಯನ್ನಾಗಿ ಮಾಡುವಲ್ಲಿ ಪ್ರಧಾನಿ ನರೇಂದ್ರ ಮೋದಿ ತೀವ್ರ ಆಸಕ್ತಿ ವಹಿಸಿದ್ದಾರೆ.

ಅವರ ಕನಸನ್ನು ಸಾಕಾರಗೊಳಿಸಲು ಯುವಕರು ಸಂಕಲ್ಪ ಮಾಡಬೇಕು. ಇಡೀ ಜಗತ್ತಿಗೆ ಮಾನವ ಸಂಪನ್ಮೂಲ ಒದಗಿಸುವ ಶಕ್ತಿ ಭಾರತಕ್ಕಿದೆ. ಆಸ್ಟ್ರೇಲಿಯಾಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಇದೇ ವಿಚಾರವನ್ನು ಪ್ರಧಾನಿ ಮೋದಿ ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದರು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಎಂಪ್ಲಾಯಬಲಿಟಿ.ಲೈಫ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ರಾಜಾದಾಸ್‌ಗುಪ್ತ ಮಾತನಾಡಿ, ಬದುಕಿನ ಯಾವುದೇ ಸನ್ನಿವೇಶ ಎದುರಿಸುವಂತಹ ಕೌಶಲ್ಯವನ್ನು ಇಂದಿನ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ.ಎಂ.ಆರ್.ಹುಲಿನಾಯ್ಕರ್ ಮಾತನಾಡುತ್ತಾ ಉದ್ಯೋಗ ಸಿಗುತ್ತಿಲ್ಲ, ಭವಿಷ್ಯ ಉತ್ತಮವಾಗುತ್ತಿಲ್ಲ ಎಂದು ಕೊರಗುವುದಕ್ಕೆ ಬದಲಾಗಿ ಇಂದಿನ ಅಗತ್ಯಕ್ಕೆ ತಕ್ಕ ಕೌಶಲ್ಯ ಮತ್ತು ಸಾಮರ್ಥ್ಯ ರೂಢಿಸಿಕೊಂಡಲು ಗಮನ ನೀಡುವುದು ಮುಖ್ಯ ಎಂದರು.

ಕಾರ್ಯಾಗಾರದ ಮುಖ್ಯ ಪೋಷಕರಾಗಿ ಶ್ರೀದೇವಿ ವೈದ್ಯಕೀಯ ನಿರ್ದೇಶಕ ಡಾ.ರಮಣ್ ಎಂ ಹುಲಿನಾಯ್ಕರ್‌ರವರು ಮಾತನಾಡಿದರು.

ಕಾರ್ಯಕ್ರಮದ ಗೌರವ ಅತಿಥಿಗಳಾಗಿ ಎಂಪ್ಲಾಯಬಿಲಿಟಿ ಲೈಫ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ರಾಜಾ ದಾಸ್‌ಗುಪ್ತ, ಮುಖ್ಯ ತಾಂತ್ರಿಕ ಅಧಿಕಾರಿ ಅನಿರುದ್ದ್ ಘಡ್ಕೆ, ಎಂಪ್ಲಾಯಬಿಲಿಟಿ ಲೈಫ್ ಉಪಾಧ್ಯಕ್ಷೆ ರುಚಿಕಾ ಸರ್ನಾ, ಬ್ರಾಂಡ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ರಿಧಿಮಾ ಬಿ ಥರೇಜಾ ಹಾಗೂ ಶ್ರೀದೇವಿ ಕಾಲೇಜಿನ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರ ವಿಶ್ವನಾಥ್, ವಿವಿಧ ವಿಭಾಗದ ಮುಖ್ಯಸ್ಥರು, ಬೋಧಕ-ಬೋಧಕೇತರ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ರೇಡಿಯೋ ಸಿದ್ಧಾರ್ಥದಲ್ಲಿ ಬಾನುಲಿ ಪಾಠ ಕಾರ್ಯಕ್ರಮಕ್ಕೆ ಚಾಲನೆ

ತುಮಕೂರು: ಮಕ್ಕಳು ಪರೀಕ್ಷೆಗೆ ಭಯಪಡುವ ಅವಶ್ಯಕತೆಯಿಲ್ಲ ಧೈರ್ಯದಿಂದ ಪರೀಕ್ಷೆಯನ್ನು ಎದುರಿಸಿ ಉತ್ತಮ ಅಂಕಗಳನ್ನು ಪಡೆದುಕೊಳ್ಳಿ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಚೇತನ್ ಕುಮಾರ್ ವಿದ್ಯಾರ್ಥಿಗಳು ಕಿವಿ ಮಾತು ಹೇಳಿದರು.

ನಗರದ ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ರೇಡಿಯೋ ಸಿದ್ಧಾರ್ಥ 90.8 ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಮಕ್ಕಳೇ ಪರೀಕ್ಷೆಗೆ ಸಿದ್ಧರಾಗಿ ಎಂಬ ಫೋನ್ ಇನ್ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಪರೀಕ್ಷೆಗೆ ಭಯ ಪಡುವ ಅಗತ್ಯವಿಲ್ಲ ನಿಮ್ಮಲ್ಲಿ ಏನೇ ಗೊಂದಲಗಳಿದ್ದರೆ ಶಿಕ್ಷಕರನ್ನು ಸಂಪರ್ಕಿಸಿ ಉತ್ತರ ಪಡೆಕೊಳ್ಳಿ. ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುವ ಮೂಲಕ ಪರೀಕ್ಷೆಯ ಭಯದಿಂದ ದೂರವಾಗಿ ಎಂದು ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಮನಮೋಹನ್ ಮಾತನಾಡಿ ವಿದ್ಯಾರ್ಥಿಗಳು ಇರುವ ಸಮಯವನ್ನು ಸದುಪಯೋಗಪಡಿಸಿಕೊಂಡು ಹೆಚ್ಚಿನ ಅಧ್ಯಯನ ಮಾಡಿ ಧೈರ್ಯದಿಂದ ಪರೀಕ್ಷೆಯನ್ನು ಬರೆಯಿರಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಪವಿತ್ರ ಮಾತನಾಡಿ ಪೋಷಕರು ವಿದ್ಯಾರ್ಥಿಗಳ ಮೇಲೆ ಒತ್ತಡವನ್ನು ಹೇರದೆ ಪರೀಕ್ಷೆಯನ್ನು ಉತ್ತಮವಾಗಿ ಬರೆಯುವಂತೆ ಪ್ರೋತ್ಸಾಹಿಸಿ. ಮಕ್ಕಳ ಮುಂದೆ ಋಣಾತ್ಮಕವಾಗಿ ಮಾತನಾಡದೇ ಯಾವಾಗಲೂ ಧನಾತ್ಮಕವಾಗಿ ಮಾತನಾಡಿ ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿ. ವಿದ್ಯಾರ್ಥಿಗಳು ಶ್ರಮವಹಿಸಿ ಕಲಿತು ಉತ್ತಮ ಅಂಕಗಳನ್ನು ಪಡೆದುಕೊಳ್ಳಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಿಕ್ಷಣಾಧಿಕಾರಿಗಳಾದ ಮಾಧವರೆಡ್ಡಿ, ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಬಿ.ಟಿ ಮುದ್ದೇಶ್, ಸಮಪನ್ಮೂಲ ವ್ಯಕ್ತಿಗಳಾದ ಲೋಕೇಶ್, ಶಶಿಕುಮಾರ್, ರಾಘವೇಂದ್ರ, ವೀಣಾ ಜಿ.ಎಲ್ ಹಾಗೂ ಮತ್ತಿತರರು ಈ ಕಾರ್ಯಗಾರದಲ್ಲಿ ಹಾಜರಿದ್ದರು.

ಶ್ರೀ ಸಿದ್ಧಾರ್ಥ ದಂತ ಕಾಲೇಜಿನಲ್ಲಿ ಪೆರಿಯೊಡಾಂಟಿಸ್ಟ್ ದಿನಾಚರಣೆ

ತುಮಕೂರು : ನಗರದ ಅಗಲಕೋಟೆಯಲ್ಲಿರುವ ಶ್ರೀ ಸಿದ್ಧಾರ್ಥ ದಂತ ಕಾಲೇಜು ಮತ್ತು ಆಸ್ಪತ್ರೆಯ ಪೆರಿಯೊಡಾಂಟಿಕ್ಸ್ ವಿಭಾಗದಿಂದ ರಾಷ್ಟ್ರೀಯ ಪೆರಿಯೊಡಾಂಟಿಸ್ಟ್ ದಿನ 2025 ರ ಅಂಗವಾಗಿ ದಂತ ರಕ್ಷಣೆ ಕುರಿತು ಜಾಗೃತಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಈ ವರ್ಷ, ಭಾರತೀಯ ಪೆರಿಯೊಡಾಂಟಿಯಾಲಜಿ ಸೊಸೈಟಿಯ ಸುವರ್ಣ ಮಹೋತ್ಸವವನ್ನೂ ಸಹ ಇರುವುದರಿಂದ ಇಂಡಿಯನ್ ಸೊಸೈಟಿ ಆಫ್ ಪೆರಿಯೊಡಾಂಟಿಯಾಲಜಿ ಸಹಯೋಗದೊಂದಿಗೆ ಮುಖಚರ್ಯೆ ಚಿತ್ರಿಸುವ ಸ್ಪರ್ಧೆ, ವಿದ್ಯಾರ್ಥಿಗಳಿಂದ ಸ್ಕಿಟ್‌ಗಳು ಮತ್ತು ದಂತ ಶಿಕ್ಷಣ ಕಾರ್ಯಕ್ರಮವನ್ನು ನಡೆಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಶ್ರೀ ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ರಿಜಿಸ್ಟ್ರಾರ್ ಡಾ. ಅಶೋಕ್ ಮೆಹತಾ ಅವರು, ಮುಖ ಸೌಂದರ್ಯವನ್ನು ಕಾಪಾಡಿಕೊಳ್ಳುವಲ್ಲಿ ದಂತದ ಪಾತ್ರ ಅತ್ಯಂತ ಪ್ರಮುಖವಾಗಿದೆ. ಪೆರಿಯೊಡಾಂಟಿಟಿಸ್ ನಂತ ಬ್ಯಾಕ್ಟೀರಿಯಾದ ಸೋಂಕಿನಿಂದ ಒಸಡುಗಳು, ಹಲ್ಲುಗಳನ್ನು ಸುತ್ತುವರೆದಿರುವ ಮೂಳೆ ಮತ್ತು ಹಲ್ಲುಗಳನ್ನು ಹಿಡಿದಿಟ್ಟುಕೊಳ್ಳುವ ಹಾಗೂ ಬೆಂಬಲಿಸುವ ಅಂಗಾಂಶಗಳ ಮೇಲೆ ಪರಿಣಾಮ ಬೀರುತ್ತದೆ. ಆಧುನಿಕ ವೈದ್ಯಕೀಯ ನೆರವುಗಳನ್ನು ಪಡೆಯುವುದರ ಮೂಲಕ ದಂತ ಸೌಂದರ್ಯವನ್ನು ಕಾಪಾಡಿಕೊಳ್ಳಿ ಎಂದರು ಕರೆ ನೀಡಿದರು.

ಡಾ.ಜೋಯ್ತಿ ಸರ್ಕಾರ್ ಸ್ನಾತಕೋತ್ತರ ವಿದ್ಯಾರ್ಥಿನಿ ಸಾಮಾನ್ಯ ಆರೋಗ್ಯದ ಮೇಲೆ ಪರಿದಂತ ಆರೋಗ್ಯದ ಮಹತ್ವದ ಬಗ್ಗೆ

ಮಾತನಾಡಿದರು. ಸರಿಯಾದ ಮೌಖಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳದಿದ್ದರೆ, ಇದು ಅಂತಿಮವಾಗಿ ದಂತಕ್ಷಯ ಮತ್ತು ವಸಡು ಕಾಯಿಲೆಗೆ ಕಾರಣವಾಗಬಹುದು. ವಸಡು ರೋಗವು ವಿಶ್ವದ 6 ನೇ ಅತ್ಯಂತ ಸಾಮಾನ್ಯ ಕಾಯಿಲೆಯಾಗಿದೆ. ಪೆರಿಯೊಡಾಂಟಿಟಿಸ್ ಒಂದು ರೀತಿಯ ಒಸಡು ಕಾಯಿಲೆಯಾಗಿದ್ದು ಅದು ನಿಮ್ಮ ಮೌಖಿಕ ಮತ್ತು ಒಟ್ಟಾರೆ ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳನ್ನು ಉಂಟುಮಾಡಬಹುದು. ಈ ಬಗ್ಗೆ ಎಚ್ಚರಿಕೆ ವಹಿಸುವುದು ಅಗತ್ಯ ಎಂದರು.

ಕಾರ್ಯಕ್ರಮದಲ್ಲಿ ಪರೀಕ್ಷಾ ನಿಯಂತ್ರಕ ಡಾ. ಜಿ. ಗುರುಶಂಕರ್, ಪೆರಿಯೊಡಾಂಟಿಕ್ಸ್ ವಿಭಾಗದ ಮುಖ್ಯಸ್ಥೆ ಡಾ.ಲಕ್ಷ್ಮಿ ಅಶ್ವಿನ್ ಕುಮಾರ್, ಕಾರ್ಯಕ್ರಮದ ಸಂಯೋಜಕ ಡಾ.ಸಂತೋಷ್ ಕುಮಾರ್ ಆರ್, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಹಿರಿಯ ದಂತ ತಜ್ಞ ಮತ್ತು ಭಾರತೀಯ ಪರಿದಂತಶಾಸ್ತ್ರ ಸಂಘದ ಮಾಜಿ ಅಧ್ಯಕ್ಷ ಡಾ. ಪ್ರವೀಣ್ ಬಿ ಕುಡ್ವ ಅವರನ್ನು ಭಾರತದಲ್ಲಿ ಪರಿದಂತ ಶಾಸ್ತ್ರದ ಸುಧಾರಣೆಗೆ ಸಲ್ಲಿಸಿದ ಸೇವೆಗಳನ್ನು ಶ್ಲಾಘಿಸಿ ಸನ್ಮಾನಿಸಲಾಯಿತು.ದ್ವಿತೀಯ ವರ್ಷದ ವಿದ್ಯಾರ್ಥಿನಿ ಅಬ್ದುಲ್ ಅಜೀಜ್ ಅವರು ಪ್ರಾರ್ಥನೆ ಮಾಡಿದರೆ, ಪ್ರಾಂಶುಪಾಲರಾದ ಡಾ.ಪ್ರವೀಣ್ ಬಿ ಕುಡ್ವ ಸ್ವಾಗತಿಸಿದರು. ಡಾ.ಜಿ.ಪುಷ್ಪಲತಾ ವಂದನೆ ಸಲ್ಲಿಸಿದರು.

ಮುಖ ಚಿತ್ರಕಲೆ ಮತ್ತು ಕಿರುಚಿತ್ರದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದವರಿಗೆ ಭಾರತೀಯ ಪರಿದಂತಶಾಸ್ತ್ರ ಸಂಘದಿಂದ ಪ್ರಶಂಸನಾ ಪತ್ರವನ್ನು ನೀಡಿ ಗೌರವಿಸಲಾಯಿತು.

ಮೊದಲ ಕಾರ್ಯಕ್ರಮವು ಫೇಸ್ ಪೇಂಟಿಂಗ್. ಈ ಫೇಸ್ ಪೇಂಟಿಂಗ್ ಸ್ಪರ್ಧೆಯ ಥೀಮ್ "ಆರೋಗ್ಯಕರ ನಗುವಿನ ಶಕ್ತಿ". ಎರಡನೇ ಕಾರ್ಯಕ್ರಮವು ಪೆರಿಯೊಡಾಂಟಲ್ ಆರೋಗ್ಯದ ಕುರಿತು ವಿದ್ಯಾರ್ಥಿಗಳಿಂದ ಮೂರು ಸ್ಕಿಟ್‌ಗಳು. ಮೂರನೇ ಕಾರ್ಯಕ್ರಮವು 200 ಕ್ಕೂ ಹೆಚ್ಚು ಪ್ರೇಕ್ಷಕರಿಗೆ ದಂತ ಆರೋಗ್ಯದ ಮಹತ್ವವನ್ನು ಒತ್ತಿಹೇಳುವ ಶೈಕ್ಷಣಿಕ ಶಿಬಿರವಾಗಿತ್ತು. ಗ್ರೂಪ್ ಫಾರ್ಮಾಸ್ಯುಟಿಕಲ್ಸ್ ಒದಗಿಸಿದ ಉಚಿತ ಟೂತ್‌ಪೇಸ್ಟ್ ಮಾದರಿಗಳನ್ನು ರೋಗಿಗಳು ಮತ್ತು ಅವರ ಸಹಾಯಕರಿಗೆ ವಿತರಿಸಲಾಯಿತು.

ಚೆಕ್‌ಪೋಸ್ಟ್ ನಿರ್ಮಿಸಿ ನಿಗಾ: ಜಿಲ್ಲಾಧಿಕಾರಿ

ತುಮಕೂರು: ಜಿಲ್ಲೆಯಲ್ಲಿ ಯಾವುದೇ ಹಕ್ಕಿಜ್ವರ ಪ್ರಕರಣಗಳು ವರದಿಯಾಗಿಲ್ಲ. ಚಿಕ್ಕಬಳ್ಳಾಪುರದಲ್ಲಿ ಮಾತ್ರ ಒಂದು ಪ್ರಕರಣ ವರದಿಯಾಗಿರುವ ಹಿನ್ನೆಲೆಯಲ್ಲಿ ಈ ಜಿಲ್ಲೆಗೆ ಸಂಪರ್ಕ ಹೊಂದಿರುವ ಮಧುಗಿರಿ ತಾಲ್ಲೂಕು ಬಳಿ ಮುನ್ನೆಚ್ಚರಿಕೆ ಕ್ರಮವಾಗಿ ಚೆಕ್ ಪೋಸ್ಟ್ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಶುಭಕಲ್ಯಾಣ್ ತಿಳಿಸಿದರು.

ನಗರದ ಪಾಲಿಕೆ ಆವರಣದಲ್ಲಿ ನೀರು ಸರಬರಾಜು ನೌಕರರು ನಡೆಸುತ್ತಿರುವ ಮುಷ್ಕರ ಸ್ಥಳಕ್ಕೆ ಭೇಟಿ ನೀಡಿ ಗುತ್ತಿಗೆ ನೌಕರರ ಸಮಸ್ಯೆ ಆಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಯಲ್ಲಿರುವ ಯಾವುದೇ ಕೋಳಿ ಫಾರಂಗಳ ಪ್ರದೇಶಗಳಲ್ಲೂ ಹಕ್ಕಿಜ್ವರ ಪ್ರಕರಣ ಕಂಡು ಬಂದಿಲ್ಲ ಎಂದರು.

ನಮ್ಮ ದೇಶದ ಆಹಾರ ಮಾಡುವ ವಿಧಾನವನ್ನು ಪ್ರತಿಯೊಬ್ಬರೂ ಪಾಲಿಸಬೇಕು. ಮಾಂಸವನ್ನು ಸುಮಾರು 70 ಡಿಗ್ರಿಯಷ್ಟು ಬೇಯಿಸಿ ನಂತರ ತಿನ್ನಬೇಕು. ಯಾವುದೇ ಕಾರಣಕ್ಕೂ ಹಸಿ ಮಾಂಸವನ್ನು ಬಳಸಬಾರದು ಎಂದು ಅವರು ಹೇಳಿದರು.

ಭೂ ಪ್ರಕರಣದಲ್ಲಿ ಆರೋಪಿತ ಸಬ್‌ರಿಜಿಸ್ಟ್ರಾರ್‌ಗೆ ನಾಗರೀಕ ಸನ್ಮಾನ...!

ಚಿಕ್ಕನಾಯಕನಹಳ್ಳಿಯಲ್ಲಿ ಕೆಆರ್‌ಎಸ್ ಪಕ್ಷದಿಂದ ವಿಭಿನ್ನವಾಗಿ ಪ್ರತಿಭಟನೆ

ಚಿಕ್ಕನಾಯಕನಹಳ್ಳಿ; ಭೂ ಪ್ರಕರಣದಲ್ಲಿ ಆರೊಪಿತರಾಗಿರುವ ಪಟ್ಟಣದ ಸಬ್‌ರಿಜಿಸ್ಟ್ರಾರ್‌ಗೆ ಕೆಆರ್‌ಎಸ್ ಪಕ್ಷದಿಂದ ನಾಗರೀಕ ಸನ್ಮಾನ ಮಾಡುವ ಮೂಲಕ ವಿಭಿನ್ನವಾಗಿ ಪ್ರತಿಭಟನೆ ಮಾಡಿದರು.

ಪಟ್ಟಣದ ನೆಹರೂ ವೃತ್ತದಿಂದ ಉಪನೊಂದಣಾಧಿ ಕಾರ್ಯಾಲಯದವರೆಗೆ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ಎತ್ತಿನ ಗಾಡಿಯಲ್ಲಿ ಮೈಸೂರುಪೇಟ, ಹಾರ ,ತುರಾಯಿ ಹಾಗೂ ಮಡಿಕೆಗಳಲ್ಲಿ ಸಾರ್ವಜನಿರಿಂದ ಚಿಲ್ಲರೆ ಹಣ ಸಂಗ್ರಹಿಸುತ್ತಾ ವಿಶಿಷ್ಟ ರೀತಿಯಲ್ಲಿ ಮೆರವಣಿಗೆಯ ಮೂಲಕ ಆಗಮಿಸಿದರು. ನಂತರ ಮುಖಂಡ ಭಟ್ಟರಹಳ್ಳಿ ಮಲ್ಲಿಕಾರ್ಜುನ್ ಮಾತನಾಡಿ ರೈತರೊಬ್ಬರ ಕೊಟ್ಯಂತರ ಬೆಲೆಬಾಳುವ ಆಸ್ತಿಯನ್ನು ನಕಲಿದಾಖಲೆ ಸೃಷ್ಟಿಸಿ ಬೇರೆಯವರಿಗೆ ಪರಭಾರೆ ಮಾಡಿ ವಂಚಿಸಿದ ಪ್ರಕರಣದಲ್ಲಿ ಎಫ್‌ಐಆರ್ ಹಾಕಿಸಿಕೊಂಡು ಆರೋಪಿತನಾಗಿರುವ ಇಲ್ಲಿನ ಸಬ್‌ರಿಜಿಸ್ಟ್ರಾರ್ ರಾಘವೇಂದ್ರ ಒಡೆಯರ್ ನ್ಯಾಯಾಲಯದಿಂದ ತಡೆಯಾಜ್ಞೆತಂದು ಇದೇ ಸ್ಥಳದಲ್ಲಿ ಸ್ವಲ್ಪವೂ ಅಪರಾಧಿ ಪ್ರಜ್ಞೆಯಿಲ್ಲದೆ ವೃತ್ತಿಮಾಡುತ್ತಾ ಸರ್ಕಾರಿ ವ್ಯವಸ್ಥೆಯಲ್ಲಿ ಭ್ರಷ್ಟಾಚಾರಕ್ಕೆ ಹೊಸಭಾಷ್ಯಬರೆದು ಮಾದರಿಯಾಗಿರುವ ಕಾರಣಕ್ಕೆ ಇಂದು ನಾಗರೀಕ ಸನ್ಮಾನ ಮಾಡುತ್ತಿದ್ದೇವೆ. ಈ ಪ್ರಕರಣದಲ್ಲಿ ಭೂಮಾಫಿಯಾ ಗುಂಪಿನೊಂದಿಗೆ ಅಧಿಕಾರಿವರ್ಗ ಕೈಜೋಡಿಸಿದ್ದಾರೆ. ಆದರೆ ಇದರಲ್ಲಿ ಆರೋಪಿತರಾಗಿರುವ ಇಲ್ಲಿನ ಉಪನೊಂದಣಾಧಿಕಾರಿಯನ್ನು ಶಾಸಕರು ಭೀಮಾರಿ ಹಾಕದೇ ವೃತ್ತಿ ಮಾಡಲು ಇಲ್ಲೇ ಉಳಿಸಿಕೊಂಡಿದ್ದಾರೆ. ವಂಚಿಸಿದವರ ಮೇಲೆ ಎಫ್.ಐ.ಆರ್ ದಾಖಲಾದರೂ ಅವರುಗಳಿಗೆ ಜಾಮೀನು ಸಿಗುವವರೆಗೂ ಪೋಲಿಸರು ಬಂಧಿಸಿಲ್ಲ. ಈ ಎಲ್ಲಾ ವ್ಯವಸ್ಥೆಗಳು ಬ್ರಷ್ಟರಿಗೆ ತಮ್ಮ ವೃತ್ತಿ ಮಾಡಲು ಪರವಾನಗಿ ಕೊಟ್ಟಂತಾಗಿದೆ. ಇದನ್ನು ಕೆಆರ್‌ಎಸ್ ಪಕ್ಷ ಗಮನಿಸಿದೆ, ಅನ್ಯಾಯಕ್ಕೊಳಗಾದ ರೈತ ತನ್ನ ದಾಖಲೆಗಳನ್ನು ಸರಿಪಡಿಸಿಕೊಳ್ಳಲು ಹೆಣಗಾಡಬೇಕಿದೆ, ತನ್ನದಲ್ಲದ ತಪ್ಪಿನಿಂದಾಗಿ ಆತನು ಪರಿತಪಿಸುವಂತಾಗಿದೆ. ಇದು ಹೀಗೆ ಮುಂದುವರೆದರೆ ಮುಂದಿನ ದಿನಗಳಲ್ಲಿ ಜನರೇ ಕಾನೂನು ಕೈಗೆ ತೆಗೆದುಕೊಳ್ಳುವ ಸ್ಥಿತಿ ಬರುತ್ತದೆ ಎಂದರು.

ನಂತರ ಉಪನೊಂದಣಾಧಿಕಾರಿಗಳ ಕಾರ್ಯಾಲಯಕ್ಕೆ ಪಕ್ಷದ ಕಾರ್ಯಕರ್ತರು ತೆರಳಿ ಉಪನೊಂದಣಾಧಿಕಾರಿ ರಾಘವೇಂದ್ರ ನಾಯಕ್‌ರಿಗೆ ಸನ್ಮಾನಿಸಲು ಮುಂದಾದರೂ ಅವರು ಸ್ವೀಕರಿಸಲಿಲ್ಲ, ಕೆಲ ಸಮಯ ವಾದವಿವಾದ ನಡೆದು, ಅವರ ಖುರ್ಚಿಗೆ ಪೇಟ ಹಾಗೂ ಹಾರಗಳನ್ನು ಮತ್ತು ಜನರಿಂದ ಸಂಗ್ರಹಿಸಿದ ಚಿಲ್ಲರೆ ನಾಣ್ಯಗಳನ್ನು ಸುರಿದು ಬಂದರು.

ನಂತರ ತಾಲ್ಲೂಕು ಕಚೇರಿಗೆ ತೆರಳಿ ಈ ಪ್ರಕರಣದಲ್ಲಿ ಭಾಗಿಯಾಗಿರುವ ಕಸಬ ವ್ಯಾಪ

ಟಾಟಾಏಸ್‌ಗೆ ಕ್ಯಾಂಟರ್ ಡಿಕ್ಕಿ: ಓರ್ವ ಬಾಲಕ ಸ್ಥಳದಲ್ಲೇ ಸಾವು

ಕೊಡಿಗೇನಹಳ್ಳಿ: ಚಲಿಸುತಿದ್ದ ಟಾಟಾಏಸಿಗೆ ಕ್ಯಾಂಟರ್ ಡಿಕ್ಕಿ ಹೊಡೆದ ಪರಿಣಾಮ ಟಾಟಾಏಸಿ ಪಲ್ಟಿಯಾಗಿ 12 ವರ್ಷದ ಬಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಹೋಬಳಿ ಮುದ್ದೇನಹಳ್ಳಿ ಗೇಟ್ ಬಳಿ ದೊಡ್ಡದಾಳವಟ್ಟದಿಂದ ಹಿಂದೂಪುರದ ಸೆಡ್ಲಪಲ್ಲಿ ತೆರಳುತಿದ್ದ ಟಾಟಾ ಏಸಿಗೆ ಹಿಂಬದಿಯಿಂದ ಬಂದ ಕ್ಯಾಂಟರ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಟಾಟಾ ಏಸಿ ವಾಹನ ಪಲ್ಟಿಯಾಗಿ ವಾಹನದಲ್ಲಿದ್ದ ರೇವಂತ್ (12 ವರ್ಷ) ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಅಪಘಾತ ಸಂಭವಿಸುತಿದ್ದಂತೆ ಕ್ಯಾಂಟರ್ ನಲ್ಲಿದ್ದ ಚಾಲಕ ಮತ್ತು ನಿರ್ವಾಹಕ ವಾಹನ ಬಿಟ್ಟು ಪರಾರಿಯಾಗಿದ್ದು ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಕ್ಯಾಂಟರ್ ಮತ್ತು ಟಾಟಾ ಏಸಿ ವಾಹನ ವಶಕ್ಕೆ ಪಡೆದಿದ್ದಾರೆ.

ಬಿಳಿದೇವಾಲಯ ಗ್ರಾ.ಪಂ. ಅಧ್ಯಕ್ಷರ ಆಯ್ಕೆ

ಕುಣಿಗಲ್ : ಬಿಳಿದೇವಾಲಯ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಮಹದೇವಮ್ಮ ಆಯ್ಕೆಯಾಗಿದ್ದಾರೆ.

ತಾಲೂಕಿನ ಬಿಳಿದೇವಾಲಯ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಮಹಾದೇವಮ್ಮ ಮುತ್ತುಗದಹಳ್ಳಿ ಪರಿಶಿಷ್ಟ ಜಾತಿ ಕ್ಷೇತ್ರದಿಂದ ಚುನಾಯಿತರಾಗಿದ್ದು ಈ ಹಿಂದಿನ ಅಧ್ಯಕ್ಷರಾದ ನಾಗರಾಜು ಎಂಬುವರು ಪಂಚಾಯಿತಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳದೆ ಗ್ರಾಮ ಪಂಚಾಯಿತಿ ಕುಂಠಿತಗೊಂಡು ಸದಸ್ಯರಲ್ಲಿ ಅಸಮಾಧಾನ ಗೊಂಡು ಅವರನ್ನು ಅವಿಶ್ವಾಸದಿಂದ ತೆಗೆದುಹಾಕಲಾಗಿತ್ತು. ಖಾಲಿ ಇದ್ದ ಅಧ್ಯಕ್ಷ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಮಹದೇವಮ್ಮ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ.

ಈ ಸಂದರ್ಭದಲ್ಲಿ ನೂತನ ಅಧ್ಯಕ್ಷೆ ಮಹಾದೇವಮ್ಮ ಮಾತನಾಡುತ್ತಾ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರು, ಚರಂಡಿ, ವಿದ್ಯುತ್ ದೀಪ ಸೇರಿದಂತೆ ನೆನೆಗುಂದಿಗೆ ಬಿದ್ದಿರುವ ಕಾಮಗಾರಿ ಕೆಲಸಗಳನ್ನು ಆರಂಭಿಸುವುದರೊಂದಿಗೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಮತ್ತು ನಮ್ಮ ಆಡಳಿತ ಅವಧಿಯಲ್ಲಿ ಎಲ್ಲಾ ಸದಸ್ಯರ ವಿಶ್ವಾಸದೊಂದಿಗೆ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಪಂಚಾಯಿತಿ ಉಪಾಧ್ಯಕ್ಷೆ ಇಯತ್ ಉನ್ನಿಸಾ, ಸದಸ್ಯರಾದ ಆನಂದಸ್ವಾಮಿ. ದೇವರಾಜ್, ಗಂಗಮ್ಮ. ಚಂದ್ರಪ್ರಭ. ಬೋರೇಗೌಡ,ಪಿಡಿಒ ಶಿವಣ್ಣ ಸೇರಿದಂತೆ ಹಲವಾರು ಉಪಸ್ಥಿತರಿದ್ದರು. ಚುನಾವಣಾ ಅಧಿಕಾರಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ ನಾರಾಯಣ ಚುನಾವಣೆ ನಡೆಸಿದರು.

ಅರಣ್ಯ ಇಲಾಖೆ ನಿರ್ಲಕ್ಷ್ಯ: ಬೋನಿಗೆ ಬಿದ್ದಿದ್ದ ಚಿರತೆ ಸಜೀವ ದಹನ!

ತುಮಕೂರು: ಅರಣ್ಯ ಇಲಾಖೆ ಸಿಬ್ಬಂದಿಯ ನಿರ್ಲಕ್ಷ್ಯದಿಂದಾಗಿ ಬೋನಿನಲ್ಲಿ ಸೆರೆಯಾದ ಚಿರತೆ ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ ಸಾವನ್ನಪ್ಪಿರುವ ಘಟನೆ ಮದ್ದೇಹಳ್ಳಿ ಗ್ರಾಮದ ನಾರಾಯಣಪ್ಪ ಎಂಬ ರೈತನ ಜಮೀನಿನಲ್ಲಿ ನಡೆದಿದೆ.

ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಮದ್ದೇಹಳ್ಳಿ ಗ್ರಾಮದಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿ ಚಿರತೆಯನ್ನು ಸೆರೆಹಿಡಿಯಲು ಬೋನು ಇರಿಸಿದ್ದರು.

ಈ ಬೋನಿನಲ್ಲಿ ಚಿರತೆಯೂ ಸಹ ಸಿಕ್ಕಿಬಿದ್ದಿತ್ತು. ಒಂದೆರೆಡು ದಿನ ಕಳೆದರೂ ಚಿರತೆಯನ್ನು ಸಾಗಿಸುವ ವ್ಯವಸ್ಥೆ ಮಾಡಿರಲಿಲ್ಲ. ಆದರೆ ನಿನ್ನೆ ಬೋನಿನ ಸುತ್ತ ಮುತ್ತಲಿನ ಪ್ರದೇಶಕ್ಕೆ ಬೆಂಕಿ ಬಿದ್ದು, ಅಸಹಾಯಕ ಚಿರತೆ ಬೆಂಕಿಯ ಕೆನ್ನಾಲಿಗೆಯಲ್ಲಿ ಸಜೀವ ದಹನವಾಗಿದೆ.

ಬೋನಿನಲ್ಲಿ ಸೆರೆಯಾದ ಚಿರತೆಯನ್ನ ತಕ್ಷಣವೇ ರಕ್ಷಣೆ ಮಾಡದ ಪರಿಣಾಮ ದುರಂತಕರ ಘಟನೆ ನಡೆದಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಭಜರಂಗದಳದಿಂದ ರಕ್ತದಾನ ಶಿಬಿರ

ಕುಣಿಗಲ್ : ದೇಶದ ಸ್ವತಂತ್ರಕ್ಕಾಗಿ ಹೋರಾಟ ಮಾಡಿ ಬಲಿದಾನವಾದವರ ತ್ಯಾಗ,ಸೇವೆ ಅಮೂಲ್ಯವಾದದ್ದು, ಅವರ ಸ್ಮರಣಾರ್ಥ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು ಎಂದು ತಾಲೂಕು ಭಜರಂಗದಳದ ತಾಲೂಕ ಅಧ್ಯಕ್ಷ ಗಿರೀಶ್ ತಿಳಿಸಿದರು.

ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ತಾಲೂಕಿನ ಭಜರಂಗದಳ ಸೇವಾ ಟ್ರಸ್ಟ್, ವಿಶ್ವ ಹಿಂದು ಪರಿಷತ್ ವತಿಯಿಂದ ಸ್ವಾತಂತ್ರ ಹೋರಟಗಾರರಾದ ವೀರ ಸಾವರ್ಕರ್, ಭಗತ್ ಸಿಂಗ್, ಚಂದ್ರ ಶೇಖರ್ ರವರ ಪುಣ್ಯ ಸ್ಮರಣೆ ಹಾಗು ಬಲಿದಾನದ ನೆನಪಿಗಾಗಿ ಜಿಲ್ಲಾ ಆಸ್ಪತ್ರೆಯ ಸಹಕಾರದೊಂದಿಗೆ ರಕ್ತದಾನ ಶಿಬಿರ ಅಯೋಜಿಸಲಾಗಿತ್ತು .

ರಕ್ತದಾನಿಗಳಿಂದ ಸುಮಾರು 34 ಯುನಿಟ್ ರಕ್ತ ಶೇಕರಣೆಯಾಯಿತು. ರಕ್ತದಾನ ಮಾಡಿದ ಎಲ್ಲರಿಗೂ ಸರ್ಟಿಫಿಕೇಟ್ ನೀಡಲಾಯಿತು. ಈ ಸಂದರ್ಭದಲ್ಲಿ ಡಾಕ್ಟರಗಳಾದ ಗಣೇಶ್ ಬಾಬು, ಮಂಜುನಾಥ್, ಡಾಕ್ಟರ್ ವೀಣಾ ಹಾಗು ಸಂಘದ ಅದ್ಯಕ್ಷ ಗಿರೀಶ್, ಪದಾಧಿಕಾರಿಗಳಾದ ಕಾರ್ತಿಕ್, ಅಜಯ್, ಹೇಮಂತ್, ಚಂದು ಅಂಬಿ, ನವೀನ್ ಸೇರಿದಂತೆ ಇತರರು ಇದ್ದರು.

ದ್ವಿತೀಯ ಪಿಯುಸಿ : ಜಿಲ್ಲೆಯಲ್ಲಿ 644 ವಿದ್ಯಾರ್ಥಿ ಗೈರು

ತುಮಕೂರು: ಜಿಲ್ಲೆಯಲ್ಲಿ ಇಂದು ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ–1ರ ರಾಜ್ಯಶಾಸ್ತ್ರ ವಿಷಯದಲ್ಲಿ 630 ಹಾಗೂ ಸಂಖ್ಯಾಶಾಸ್ತ್ರ ವಿಷಯದಲ್ಲಿ 14 ವಿದ್ಯಾರ್ಥಿಗಳು ಸೇರಿ ಒಟ್ಟು 644 ವಿದ್ಯಾರ್ಥಿಗಳು ಗೈರು ಹಾಜರಿದ್ದಾರೆ ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕ ಬಾಲಗುರುಮೂರ್ತಿ ತಿಳಿಸಿದ್ದಾರೆ. ರಾಜ್ಯ ಶಾಸ್ತ್ರ ವಿಷಯಕ್ಕೆ ಒಟ್ಟು 5465 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, ಈ ಪೈಕಿ 4835 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಅದೇ ರೀತಿ ಸಂಖ್ಯಾಶಾಸ್ತ್ರ ವಿಷಯಕ್ಕೆ ಒಟ್ಟು 926 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, ಈ ಪೈಕಿ 912 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ತುಮಕೂರಿನಲ್ಲಿ ಬಿಗ್‌ಬಾಸ್ ವಿಜೇತ ಹನುಮಂತಗೆ ಅಭಿನಂದನೆ

ತುಮಕೂರು ನಗರದ ಜಿಲ್ಲಾ ಬಂಜಾರ ಭವನದಲ್ಲಿ ಕರ್ನಾಟಕ ಬಂಜಾರ ಜಾಗೃತಿದಳ ಸಂಘಟನೆ ವತಿಯಿಂದ ಆಯೋಜಿಸಿದ್ದ ಶ್ರೀ ಸಂತ ಸೇವಾಲಾಲ್ ಮಹಾರಾಜ ಜಯಂತಿ ಕಾರ್ಯಕ್ರಮ ಹಾಗೂ ಹನುಮಂತ ಲಮಾಣಿ (ಬಿಗ್ ಬಾಸ್ ವಿಜೇತ) ರವರಿಗೆ ಅಭಿನಂದನಾ ಸಮಾರಂಭ ಕಾರ್ಯಕ್ರಮ ಸಾವಿರಾರು ಯುವಕರೊಂದಿಗೆ ಯಶಸ್ವಿಯಾಗಿ ನಡೆಸಲಾಯಿತು. ಇದಕ್ಕೂ ಮುಂಚಿತವಾಗಿ ನಗರದ ಜೂನಿಯರ್ ಕಾಲೇಜು ಮೈದಾನದಿಂದ ಲಕ್ಕಪ್ಪ ವೃತ್ತ (ಕಾಲ್‌ಟೆಕ್ಸ್)ದವರೆಗೆ ಸಂತ ಸೇವಾಲಾಲ್ ಮಹಾರಾಜರ ಭಾವಚಿತ್ರ ಮೆರವಣಿಗೆ ಹಾಗೂ ಹನುಮಂತ ಲಮಾಣಿ ರವರಿಗೆ ರೋಡ್ ಶೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಬಂಜಾರ ಜಾಗೃತಿ ದಳ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ತಿಪ್ಪನಾಯ್ಕ್ ವಹಿಸಿ ಮಾತನಾಡಿ ಬಂಜಾರ ಸಮಾಜ ಯುವ ಪೀಳಿಗೆ ಆರ್ಥಿಕವಾಗಿ ಸಾಮಾಜಿಕ ವಾಗಿ ಮುಂದುವರಿಯಬೇಕು ಈ ಸಮಾಜದ ರಕ್ಷಣೆಯ ಜವಾಬ್ದಾರಿಯನ್ನು ಯುವಪೀಳಿಗೆ ರೂಡಿಸಿಕೊಳ್ಳಬೇಕು ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಕರ್ನಾಟಕ ಬಂಜಾರ ಜಾಗೃತಿದಳ ಸಂಘಟನೆ ಒಳ ಮೀಸಲಾತಿ ವಿರುದ್ಧ ಹೋರಾಟ ನಡೆಸಬೇಕು ಎಂದು ಕರೆ ನೀಡಿದರು. ಜಿಲ್ಲಾಧ್ಯಕ್ಷರಾದ ಶಿವಾನಂದ ರಾಥೋಡ್ ಮಾತನಾಡಿ ನಮ್ಮ ಸಂಘಟನೆ ಶಕ್ತಿ ಸಮಾಜವನ್ನು ಹೊಟ್ಟುಗ್ಗೂಡಿಸಲು ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ನ್ಯಾಯಾಧೀಶರಾದ ಗಣೇಶ್ ನಾಯ್ಕ್ ರವರು ಮಾತನಾಡಿ ದರು.

ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಯಾಗಿ ಹನುಮಂತ ಲಮಾಣಿ ಬಿಗ್ ಬಾಸ್ ವಿಜೇತ ಆಗಮಿಸಿದ್ದು ಇಡೀ ಕಾರ್ಯಕ್ರಮದ ಕೇಂದ್ರ ಬಿಂದು ಆಗಿದ್ದು. ಹನುಮಂತ ಲಮಾಣಿ ರವರು ಮಾತನಾಡಿ ನನ್ನ ಜಯಕ್ಕೆ ತಿಪ್ಪಸರ್ ನಾಯ್ಕ್ ರವರ ಬೆಂಬಲ ಬಹಳ ಇದೆ ಜೊತೆಗೆ ಸಮಾಜದ ಸಹಕಾರ ಬಹಳ ಇದೆ ಎಂದು ಮಾತನಾಡಿದರು.

ಕರ್ನಾಟಕ ಬಂಜಾರ ಜಾಗೃತಿ ದಳ(ರಿ) ಸಂಘಟನೆ ಕೇವಲ ಒಂದು ಜಿಲ್ಲೆಗೆ ತಾಲ್ಲೂಕಿಗೆ ಗ್ರಾಮಗಳಿಗೆ ಸೀಮಿತ ವಾಗದೆ ಇಂದು ಇಡೀ ರಾಜ್ಯಾದ್ಯಂತ ಪ್ರತಿ ತಾಂಡಗಳಿಗೆ ಪ್ರತಿ ತಾಲ್ಲೂಕು ಜಿಲ್ಲೆಗಳಲ್ಲಿ ಮನೆ ಮಾತಾಗಿರುವ ಸಂಘಟನೆ ಈ ಸಂಘಟನೆ ಬಗ್ಗೆ ನನಗೆ ಬಹಳ ಗೌರವ ಇದೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ಬಂಜಾರ ಜಾಗೃತಿ ದಳ ರಾಜ್ಯ ಕಾರ್ಯಧ್ಯಕ್ಷರಾದ ಬಿ.ಡಿ ತೋಳಚ ನಾಯ್ಕ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಖ್ಯಾತ ಉದ್ಯಮಿಗಳಾದ ರಮೇಶ್ ನಾಯ್ಕ್. ಮಹಿಳಾ ಘಟಕ ರಾಜ್ಯಾಧ್ಯಕ್ಷರಾದ ದೇವಿ ಬಾಯಿ. ಮಹಿಳಾ ಘಟಕ ಜಿಲ್ಲಾಧ್ಯಕ್ಷರಾದ ತನುಜಾ ಬಾಯಿ.ಜಿಲ್ಲಾ ಸಂಚಾಲಕರಾದ ನಾರಾಯಣ ನಾಯಕ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಂಜಿ ನಾಯಕ್ ಪುರುಷೋತ್ತಮ್ ನಾಯ್ಕ್ ಜಿಲ್ಲಾ ಉಪಾಧ್ಯಕ್ಷರಾದ ಶಾಂತಕುಮಾರ್ ನಾಯ್ಕ್ ಜಿಲ್ಲಾ ನಗರ ಕಾರ್ಯಧ್ಯಕ್ಷರಾದ ಶಶಿಕುಮಾರ್ ನಾಯ್ಕ್. ವೌನೇಶ್ ರಾಠೋಡ್ ಮತ್ತಿತ ಯುವಕರು ವೇದಿಕೆಯಲ್ಲಿ ಹಾಜರಿದ್ದರು.

ಜಿಲ್ಲಾ ಆಸ್ಪತ್ರೆಯ ಡಿ ಗ್ರೂಪ್ ನೌಕರರ ಪ್ರತಿಭಟನೆ

ಹೊರಗುತ್ತಿಗೆ ಪದ್ದತಿ ಸಮಸ್ಯೆ ನಿವಾರಣೆಗೆ ಡಿಎಸ್‌ಗೆ ಮನವಿ

ತುಮಕೂರು:ನಗರದಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ಡಿ ಗ್ರೂಪ್ ನೌಕರರುತಮ್ಮ ಸಮಸ್ಯೆಗಳನ್ನು ನಿವಾರಿಸುವಂತೆ ಒತ್ತಾಯಿಸಿ ಬುಧವಾರ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಅಸ್ಗರ್ ಬೇಗ್ ಅವರಿಗೆ ಮನವಿ ಪತ್ರಸಲ್ಲಿಸಿದರು.

ಈ ನೌಕರರ ಹೋರಾಟದಲ್ಲಿ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿ ಬೆಂಬಲ ವ್ಯಕ್ತಪಡಿಸಿದರು. ಗುತ್ತಿಗೆ ಪದ್ದತಿಯನ್ನು ರದ್ದು ಮಾಡಿ ನಮ್ಮನ್ನು ನೇಮಕ ಮಾಡಿಕೊಂಡು ನೇರ ವೇತನ ಪಾವತಿ ಮಾಡುವ ವ್ಯವಸ್ಥೆಯಡಿ ತರಬೇಕು ಎಂದು ನೌಕರು ಮನವಿ ಮಾಡಿದರು.

ಗುತ್ತಿಗೆ ಏಜೆನ್ಸಿಯವರು ಸಕಾಲದಲ್ಲಿ ತಮಗೆ ವೇತನ ನೀಡುವುದಿಲ್ಲ, ಇದರಿಂದ ಸಂಸಾರ ನಿರ್ವಹಣೆಗೆ ಕಷ್ಟವಾಗುತ್ತಿದೆ. ಅಲ್ಲದೆ, ನಮಗೆ ಪಿ.ಎಫ್, ಇಎಸ್‌ಐ ನಂಬರ್ ಕೊಟ್ಟಿಲ್ಲ, ಪ್ರತಿ ತಿಂಗಳ ಹತ್ತನೇ ತಾರೀಖಿನೊಳಗೆ ವೇತನ ನೀಡುವಂತೆಕ್ರಮ ಕೈಗೊಳ್ಳಲು ಶಸ್ತ್ರಚಿಕಿತ್ಸಕರಿಗೆ ಕೋರಿಕೆ ಸಲ್ಲಿಸಿದರು.

ಹೊರಗುತ್ತಿಗೆ ಪದ್ದತಿ ವಿಚಾರವಾಗಿ ಸರ್ಕಾರತೀರ್ಮಾನ ಮಾಡಬೇಕು, ಅಲ್ಲಿಯವರೆಗೂ ಇದೇ ವ್ಯವಸ್ಥೆಯಲ್ಲಿ ಕೆಲಸ ಮಾಡುವುದು ಅನಿವಾರ್ಯ ಎಂದು ಹೇಳಿದ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಅಸ್ಗರ್ ಬೇಗ್, ನಿಮ್ಮ ಬೇಡಿಕೆಯನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಸೂಕ್ತಕ್ರಮ ಕೈಗೊಳ್ಳಲು ಮನವಿ ಮಾಡುತ್ತೇನೆಎಂದು ಹೇಳಿದರು.

ಕನ್ನಡ ಸೇನೆ ಜಿಲ್ಲಾಧ್ಯಕ್ಷ ಧನಿಯಾಕುಮಾರ್, ಅಖಿಲ ಕರ್ನಾಟಕ ಕಾರ್ಮಿಕರ ಪ್ರಜಾ ವೇದಿಕೆ ರಾಜ್ಯಾಧ್ಯಕ್ಷ ಮೀಸೆ ಸತೀಶ್, ಕನ್ನಡ ಮತ್ತು ಸಂಸ್ಕೃತಿ ವೇದಿಕೆ ಅಧ್ಯಕ್ಷ ಕನ್ನಡ ಪ್ರಕಾಶ್, ಡಾ.ಅಂಬೇಡ್ಕರ್ ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ರಾಮಾಂಜಂದ್ರರಾವ್, ಅಲ್ಪಸಂಖ್ಯಾತರ ಘಟಕ ಅಧ್ಯಕ್ಷ ಶಬ್ಬೀರ್ ಅಹ್ಮದ್, ಮುಖಂಡರಾದ ಭಾನುಪ್ರಕಾಶ್, ರೇಖಾ, ಮಲ್ಲೇಶಯ್ಯ ಭಾಗವಹಿಸಿದ್ದರು.

ನಾಳೆಯಿಂದ ಬೊಮ್ಮನಹಳ್ಳಿಯ ಶ್ರೀ ಆದಿಶಕ್ತಿ ಮಾರಮ್ಮ ದೇವಿಯ ಜಾತ್ರಾ ಮಹೋತ್ಸವ

ತುಮಕೂರು : ತುಮಕೂರು ತಾಲ್ಲೂಕು ಊರ್ಡಿಗೆರೆ ಹೋಬಳಿ, ಕೆಸರಮಡು ಅಂಚೆ, ಶ್ರೀಕ್ಷೇತ್ರ ಬೊಮ್ಮನಹಳ್ಳಿಯಲ್ಲಿನ ಶ್ರೀ ಆದಿಶಕ್ತಿ ಮಾರಮ್ಮ ದೇವಿಯ ಜಾತ್ರಾ ಮಹೋತ್ಸವವು ಇದೇ ತಿಂಗಳ ಶುಕ್ರವಾರ 07ನೇ ತಾರೀಖಿನಿಂದ ಪ್ರಾರಂಭವಾಗಿ 13ನೇ ತಾರೀಖು ಗುರುವಾರದವರೆಗೆ ನಡೆಯಲಿದೆ.

ದಿನಾಂಕ 08–03–2025 ಶನಿವಾರ ಕಂಬ ಪ್ರತಿಷ್ಠಾಪನೆ, 09–03–2025 ಭಾನುವಾರ ಘಟೆ ಉತ್ಸವ, 10–03–2025 ಸೋಮವಾರ ಅಮ್ಮನವರಿಗೆ ವಿಶೇಷ ಹೂವಿನ ಅಲಂಕಾರ, ಭಕ್ತಾಧಿಗಳಿಗೆ ಅನ್ನಸಂತರ್ಪಣೆ, ಅಗ್ನಿಕುಂಡ ಹಾರುವುದು, ಉಯ್ಯಾಲೆ ಉತ್ಸವ, ಮುತ್ತಿನಪಲ್ಲಕ್ಕಿ ಉತ್ಸವ ನಡೆಯುತ್ತದೆ, 11–03–2025 ಮಂಗಳವಾರ ಮಧ್ಯಾಹ್ನ 12.30ಕ್ಕೆ ವಿಶೇಷವಾಗಿ ಅದ್ಧೂರಿ ಮಡಿತೇರು ನಡೆಯಲಿದ್ದು ಈ ಸಂದರ್ಭದಲ್ಲಿ ವಿಶೇಷ ಹೂವಿನ ಅಲಂಕಾರ, ತೇರಿನಹೋಮ, ಹಗಲಾರತಿ ಹಾಗೂ ಪುಣ್ಯಾರ್ಚನೆ ನಡೆಯಲಿದೆ, ನಂತರ 12–03–2025 ಬುಧವಾರ ಕಂಬ ವಿಸರ್ಜನೆ, 13–03–2025 ಬುಧವಾರ ಮಡ್ಲಕ್ಕಿ ಉತ್ಸವವನ್ನು ಏರ್ಪಡಿಸಲಾಗಿದ್ದು ಭಕ್ತಾದಿಗಳು ಈ ಧಾರ್ಮಿಕ ಜಾತ್ರಾ ಮಹೋತ್ಸವದಲ್ಲಿ ಸಕ್ರೀಯವಾಗಿ ಭಾಗವಹಿಸಿ ತಾಯಿಯ ಕೃಪೆಗೆ ಪಾತ್ರರಾಗಬೇಕೆಂದು ಊರಿನ ಹಾಗೂ ಅಕ್ಕ–ಪಕ್ಕದ ಗ್ರಾಮಸ್ಥರುಗಳ ಪರವಾಗಿ ಶ್ರೀ ಆದಿಶಕ್ತಿ ಮಾರಮ್ಮದೇವಿ ದೇವಸ್ಥಾನದ ಅಭಿವೃದ್ಧಿ ಟ್ರಸ್ಟ್ ವತಿಯಿಂದ ಮನವಿಯನ್ನು ಮಾಡಿರುತ್ತಾರೆ.

ಹುಳಿಯಾರು ಪ.ಪಂ.ನಿಂದ ಸುಂಕ ವಸೂಲಾತಿ ಗುತ್ತಿಗೆ: ರೂ.6,88,900 ಸಂಗ್ರಹ

ಹುಳಿಯಾರು : ಹುಳಿಯಾರು ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಖಾಸಗಿ ಬಸ್ ನಿಲ್ದಾಣದ ಬಸ್ಸುಗಳ ಶುಲ್ಕ ವಸೂಲಾತಿ, ವಾರದ ಸಂತೆ ನೆಲವಳಿ ಸುಂಕ ವಸೂಲಾತಿ ಹರಾಜು, ಹುಣುಸೆ ಮರದ ಫಸಲು ಹರಾಜು, ಫುಟ್ಪಾತ್ ಅಂಗಡಿಗಳ ವಸೂಲಾತಿ ಹಕ್ಕಿನ ಹರಾಜು ಹಾಗೂ ಅನುಪಯುಕ್ತ ಸಾಮಗ್ರಿಗಳ ಪ್ರಕ್ರಿಯೆಯು ಪಟ್ಟಣ ಪಂಚಾಯಿತಿ ಆವರಣದಲ್ಲಿ ಮುಖ್ಯಾಧಿಕಾರಿ ಎಸ್.ನಾಗಭೂಷಣ್ ಅವರ ಉಪಸ್ಥಿತಿಯಲ್ಲಿ ಬುಧವಾರ ಜರುಗಿತು.

5 ರೀತಿಯ ಸುಂಕ ವಸೂಲಾತಿ ಗುತ್ತಿಗೆ ಹಾರಾಜು ಪ್ರಕ್ರಿಯೆಯ ಮೂಲಕ ಪಟ್ಟಣ ಪಂಚಾಯ್ತಿಗೆ 6,88,900 ರೂ. ಸಂಗ್ರಹವಾಯಿತು. ಆದರೆ ಕಳೆದ ಬಾರಿ ಸಂಗ್ರಹವಾದ ಹಣಕ್ಕಿಂತ ಅರ್ಧಕ್ಕರ್ಧ ಹಣ ಈ ಬಾರಿ ಕಡಿಮೆ ಸಂಗ್ರಹವಾಯಿತು. ಕಳೆದ ಬಾರಿ 12,84,600 ರೂ ಸಂಗ್ರಹವಾಗಿದ್ದು ಈ ಬಾರಿ 6,04,700 ರೂ. ಕಡಿಮೆ ಹಣ ಸಂಗ್ರಹವಾಗಿದೆ. ಇದಕ್ಕೆ ವಿವಿಧ ಕಾರಣಗಳಿದ್ದು ಹರಾಜು ಸಂದರ್ಭದಲ್ಲಿ ಈ ಸಂಬಂಧ ಮಾತಿನ ಚಕಮಕಿ ನಡೆದು ಬಿಡ್ ತಡೆಯಿಡಿಯುವುದಾಗಿ ಪಪಂ ಹೇಳಿದರೂ ಅನಿವಾರ್ಯವಾಗಿ ಬಿಡ್ ಪ್ರಕ್ರಿಯೆ ಮುಗಿಸಿದರು.

ಕಳೆದ ಬಾರಿ ಫುಟ್ಪಾತ್ ಅಂಗಡಿಗಳ ವಸೂಲಾತಿ ಹಕ್ಕು ದಾಖಲೆಯ 9.99 ರೂಪಾಯಿಗೆ ಹರಾಜಾಗಿದ್ದರೆ ಈ ಬಾರಿ ಚನ್ನಕೇಶವ ಅವರಿಗೆ 5,00,500 ರೂಗೆ ನಿಂತಿತು. ಖಾಸಗಿ ಬಸ್ಸುಗಳ ಶುಲ್ಕ ವಸೂಲಾತಿ ಹಕ್ಕು 1.02.000 ರೂಪಾಯಿಗಳಿಗೆ ಹಾರಾಜಾಗಿತ್ತು ಆದರೆ ಈಗ ಕೇವಲ 15 ಸಾವಿರ ರೂ